ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೇ, ನಮ್ಮ ರಸ್ತೆಗಳ ಪರಿಸ್ಥಿತಿಯು ತುಂಬಾ ಹಾಳಾಗಿ ಹೋಗುತ್ತಿದೆ. ಹೀಗೆ ಅವಕಾಶವನ್ನು ಕೊಟ್ಟರೆ ಅಲ್ಲಿ ರಸ್ತೆಗಳಿಗೆ ಮಣ್ಣು ಹಾಕುವವರೂ ಕೂಡ ಇಲ್ಲ. ಹೊಸತಾಗಿ ಮತ್ತೆ ಮಳೆಗಾಲ ಪ್ರಾರಂಭವಾಗುವ ಸಮಯವೂ ಬಂತು.

ಅಧ್ಯಕ್ಷರು:- ಅವರು ವಿವರಗಳನ್ನು ಸಂಗ್ರಹ ಮಾಡಬೇಕಾದುದರಿಂದ 15 ದಿನಗಳ ಕಾಲಾವಕಾಶವನ್ನು ಕೇಳಿದ್ದರು. ನಾನು ಒಂದು ವಾರದಲ್ಲಿ ಉತ್ತರ ಕೊಡಲು, ಕೇಳಿಕೊಂಡ ಮೇರೆಗೆ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಮಗೆ ಒಂದು ವಾರದಲ್ಲಿ ರಸ್ತೆಯ ರಿಪೇರಿ ಆಗಬೇಕಾಗಿದೆ. ಆದರೆ ಉತ್ತರಕೊಡಲು ಒಂದು ವಾರವನು ಕೇಳುತ್ತಿದ್ದಾರೆ.

ಶ್ರೀ ಎಂ. ವೈ ಘೋರ್ಪಡೆ:- ಮಾನ್ಯ ಸದಸ್ಯರು ವಿವರವಾದ ಪಟ್ಟಿಯನ್ನು ಕೇಳಿದ್ದಾರೆ. ರಾಜ್ಯದಲ್ಲಿ ಯಾವ ಯಾವ ಗ್ರಾಮೀಣ ರಸ್ತೆಯನ್ನು ಅಭಿವೃದ್ಧಿಗಾಗಿ ತೆಗೆದುಕೊಂಡಿದ್ದೀರಿ ಎಂದು ಕೇಳಿದ ಕಾರಣ ವಿವರ ಸಂಗ್ರಹಿಸಲು ಒಂದು ವಾರದ ಅವಕಾಶ ಕೇಳಿದ್ದೇನೆ.

ಶ್ರೀ ಆರಗಜ್ಞಾನೇಂದ್ರ:- ನಾವು ಮಾಹಿತಿಗಳನ್ನು ಕೇಳುವುದು ನಮ್ಮ ಹಕ್ಕಿನ ಮೇರೆಗೆ. ಅದನ್ನು ಸಕಾಲದಲ್ಲಿ ಮಾನ್ಯ ಸಚಿವರು ಒದಗಿಸಿಕೊಡಬೇಕು. ಒಂದು ವಾರದಲ್ಲಿ ಕೊಡುತ್ತೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಬೇಕು. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಗೆ ಆರೋಗ್ಯ ತಪಾಸಣಾ ಕೇಂದ್ರವನ್ನು ಸ್ಥಾಪಿಸುವುದು

82(790) ಶ್ರೀ ಅಶೋಕ್ ಆರ್. (ಉತ್ತರ ಹಳ್ಳಿ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಗೆ ಸಂಬಂಧಪಟ್ಟಂತೆ ಬೋಳಾರೆ ಮತ್ತು ಅದರ ಗ್ರಾಮಗಳಲ್ಲಿ ಉಪ ಆರೋಗ್ಯ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಬೋಳಾರೆ ಮತ್ತು ಆಗರ ಗ್ರಾಮಗಳಲ್ಲಿ ಉಪ ಆರೋಗ್ಯ ತಪಾಸಣಾ ಕೇಂದ್ರಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಡಾ॥ ಎ. ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಆರ್. ಅಶೋಕ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಎರಡು ಪ್ರಶ್ನೆಗಳಿಗೆ, ಇಲ್ಲ, ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಸರಿಯಾದ ಮಾಹಿತಿಗಳನ್ನು ಮತ್ತು ಕಾರಣಗಳನ್ನು ಕೊಟ್ಟಿಲ್ಲ. ಸ್ಥಳದ ಅಭಾವ ಅಥವಾ ಕಾನೂನಿನ ತೊಡಕು ಇದೆ ಎಂದು ಕೂಡ ಹೇಳಿಲ್ಲ. ಅಥವಾ ಇದನ್ನು ಮಾಡಲು ಬರುವುದೇ ಇಲ್ಲವೆಂದೂ ಹೇಳಿಲ್ಲ. ಸರಕಾರದಲ್ಲಿ ಅದನ್ನು ಮಾಡಲು ಸಧ್ಯ ಹಣವಿಲ್ಲ ಎಂದು ಕೂಡ ಹೇಳಿಲ್ಲ. ಕೇವಲ ಇಲ್ಲ, ಉದ್ಭವಿಸುವುದಿಲ್ಲ ಎಂದು ಹೇಳಿದರೆ ನಾವು ಏನು ಅರ್ಥ ಮಾಡಿಕೊಳ್ಳುವುದು? ಮಾನ್ಯ ಸಚಿವರು ದಯಮಾಡಿ ಹೇಳಬೇಕು.

ಡಾ॥ ಎ.ಬಿ.ಮಲಕರೆಡ್ಡಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಅಣ್ಣಯ್ಯರವರು ಕೇಳಿದ ಪ್ರಶ್ನೆಗೆ ಕೊಟ್ಟ ಉತ್ತರವನ್ನು ಮಾನ್ಯ ಸದಸ್ಯರಾದ ಅಶೋಕ್ ರವರಿಗೂ ಹೇಳಬೇಕು. ಈ ಆರೋಗ್ಯ ಉಪಕೇಂದ್ರಗಳನ್ನು ಸ್ಥಾಪನೆ ಮಾಡಲು ಕೆಲವು ನಾರ್ಮ್ಸ್ ಇವೆ. ಅವುಗಳನ್ನು ನಾವು ಅನುಸರಿಸಿ ಆರೋಗ್ಯ ಉಪಕೇಂದ್ರಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ. 5000 ಜನಸಂಖ್ಯೆಗೆ ಬಯಲುಸೀಮೆ ಪ್ರದೇಶದಲ್ಲಿ ಹಾಗೂ 3000 ಸಾವಿರ ಜನಸಂಖ್ಯೆಗೆ ಗುಡ್ಡಗಾಡು ಪ್ರದೇಶದಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಕೇಂದ್ರ ಸರಕಾರದ ಮಾರ್ಗಸೂಚಿ ಇದೆ ಹಾಗೂ ನಮ್ಮ ರಾಜ್ಯ ಸರಕಾರದ ಮಾರ್ಗಸೂಚಿಯೂ ಹಾಗೆಯೇ ಇದೆ. ಅದರ ಪ್ರಕಾರವೂ ಉಪ ಕೇಂದ್ರಗಳನ್ನು ಪ್ರಾರಂಭ ಮಾಡುತ್ತೇವೆ. ತಮ್ಮ ಬೆಂಗಳೂರು ದಕ್ಷಿಣ ತಾಲೂಕಿನ ಜನಸಂಖ್ಯೆ 3, 19,000 ಅದಕ್ಕನುಗುಣವಾಗಿ ಈಗಾಗಲೇ 19 ಆರೋಗ್ಯ ಉಪಕೇಂದ್ರಗಳು ಕೆಲಸ ಮಾಡುತ್ತಿವೆ. ಇನ್ನೂ ಒಂದು ಮಂಜೂರು ಮಾಡಬೇಕಾಗಿದೆ. ಅದಕ್ಕೆ ಸ್ವಲ್ಪ ಸಮಯ ಕೊಡಿ. ಈಗ ಜನಗಣತಿ ನಡೆದಿದೆ. ಇನ್ನೊಂದೆರಡು ಮೂರು ತಿಂಗಳು ಕಾಲ ಆದಮೇಲೆ, ನೀವು ಕೇಳಿರುವ ಎರಡು ಪ್ರದೇಶದಕ್ಕೂ ಕೊಡುವುದಕ್ಕೆ ಆಗುವುದಿಲ್ಲ, ಅವೆರಡರಲ್ಲಿ ಒಂದನ್ನು ಆರಿಸಿಕೊಳ್ಳಿ.

ಟಿ.ಸಿ.ಹೆಚ್. ತರಬೇತಿ ಅವಧಿಯನ್ನು ಹೆಚ್ಚಿಸುವುದು

83 (818) ಶ್ರೀ ನಂಜಯ್ಯನಮಠ್ ಎಸ್.ಜಿ. (ಗುಳ್ಳೇದಗುಡ್ಡ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಟಿ.ಸಿ.ಹೆಚ್. ತರಬೇತಿ ಅವಧಿಯನ್ನು ಹೆಚ್ಚಿಸುವ ವಿಚಾರ ಸರ್ಕಾರಕ್ಕೆ ಇದೆಯೇ? ಹಾಗಾದಲ್ಲಿ ಎಷ್ಟು ಅವಧಿಗೆ; ಅವಧಿಯನ್ನು ವಿಸ್ತರಿಸುವುದಕ್ಕಿಂತ ಒಂದು ವರ್ಷ ಶಾಲಾ ತರಬೇತಿ ಕೊಡುವ ವಿಚಾರ ಇದೆಯೇ;

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸದ್ಯದಲ್ಲಿ ಈ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಎಸ್.ಜಿ. ನಂಜಯ್ಯನಮಠ್: ಅಧ್ಯಕ್ಷರೇ, ಈ ವಿಚಾರದಲ್ಲಿ ನನ್ನ ನಿವೇದನೆ ಇಷ್ಟೇ: ಟಿಸಿಎಚ್ ತರಬೇತಿಯನ್ನು ಎರಡು ವರ್ಷ ಮುಗಿಸಿದ ಮೇಲೆ ಮತ್ತೆ ಯಾವುದಾದರೂ ಪರೀಕ್ಷೆಗೆ ಅವರನ್ನು ಗುರಿಪಡಿಸುವುದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ಇದಕ್ಕೆ ಸರ್ಕಾರ ತನ್ನ ನಿರ್ಣಯ ತೆಗೆದುಕೊಳ್ಳಬೇಕೆಂದಿದ್ದರೂ ಕೂಡ ನಮ್ಮ ಶಿಕ್ಷಣ ಸಚಿವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಕಾರಣದಿಂದ ಸರ್ಕಾರಕ್ಕೆ ನನ್ನ ಸಲಹೆ ಇಷ್ಟೇ, ಒಂದು ವರ್ಷದ ಯಾವುದಾದರು ಪರೀಕ್ಷೆಗೆ ಅವರನ್ನು